ಶ್ರೀ ಎಂ. ರಘುಪತಿ (ಮೀನುಗಾರಿಕಾ ಮಂತ್ರಿಗಳು).—ಮಾನ್ಯ ಅಧ್ಯಕ್ಷರೆ, ಭಾರಿ ಮತ್ತು ಮಧ್ಯಮ ಕೈಗಾರಿಕೆ ಮತ್ತು ವಿದ್ಯುತ್ ಮಂತ್ರಿಗಳ ಪರವಾಗಿ, ೧೯೫೬ನೇ ಇಸವಿ ಕಂಪನಿಗಳ ಶಾಸನ ೬೧೯ (ಎ) ಕಲಮಿನ ಮೇರೆಗೆ

೧೯೮೫-೮೬ನೇ ಸಾಲಿನ ಕರ್ನಾಟಕ ವಿದ್ಯುತ್ ನಿಗಮ ನಿಯಂತ್ರಿತದ ೧೬ನೇ ವಾರ್ಷಿಕ ವರದಿಯನ್ನು ಹಾಗೂ

೨) ೧೯೪೯ನೇ ಇಸವಿ ವಿದ್ಯುಚ್ಛಕ್ತಿ ಸರಬರಾಜು ಅಧಿನಿಯಮದ ೬೯ನೇ ಪ್ರಕರಣದ ೫ (ಎ) ಉಪ ಪ್ರಕರಣದ ಮೇರೆಗೆ

೧೯೮೫-೮೬ನೇ ಸಾಲಿನ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯ ಲೆಕ್ಕಗಳು, ಆಸ್ತಿ ಮತ್ತು ಹೊಣೆಯನ್ನು ವರದಿಯೊಂದಿಗೆ ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.—ಕಾಗದ ಪತ್ರಗಳನ್ನು ಸಭೆಯ ಮುಂದಿಡಲಾಯಿತು. ಈಗ ವರದಿಗಳನ್ನೊಪ್ಪಿಸುವುದು.

ಶ್ರೀ ಎಂ.ಎಸ್. ಕೃಷ್ಣನ್.—ನಾನು ಆಗಲೇ ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡಿದೆ. ಪ್ರಶ್ನೋತ್ತರ ವೇಳೆ ಇದ್ದುದರಿಂದ ಮತ್ತು ತಾವು ಹೇಳಿದುದರಿಂದ ತಮ್ಮ ಮಾತಿಗೆ ಬೆಲೆ ಕೊಟ್ಟು ಕುಳಿತುಕೊಂಡೆ.

(ಗೊಂದಲ)

ಅಧ್ಯಕ್ಷರು.—ಈಗ ವರದಿಗಳನ್ನು ಒಪ್ಪಿಸಲಿ, ಆಜೆಂಡಾ ಪ್ರಕಾರ ನಾನು ಹೋಗುತ್ತಿದ್ದೇನೆ.

(ಗೊಂದಲ)

ಶ್ರೀ ಎಂ.ಎಸ್. ಕೃಷ್ಣನ್.—ಇವತ್ತಿನ ದಿವಸ ಒಬ್ಬ ಮಂತ್ರಿಗಳಿಗೆ ಅವಕಾಶ ಮಾಡಿಕೊಟ್ಟಿದ್ದೀರಿ. ಕೌನ್ಸಿಲ್‌ಗೆ ಹೋಗಬಹುದು ಪ್ರಶ್ನೆ.....

(ಗೊಂದಲ)

ಅಧ್ಯಕ್ಷರು.—ಈಗ ನಾನು ಅವಕಾಶ ಕೊಡುವುದಿಲ್ಲ. ನಾವೂ ನೀವೂ ಸೇರಿ ಮಾತನಾಡೋಣ.

ಶ್ರೀ ಎಂ.ಎಸ್. ಕೃಷ್ಣನ್.—ಆಗಲೇ ಎದ್ದುನಿಂತೆ ತಾವು ಕೂರಿಸಿದಿರಿ. ಪ್ರಶ್ನೋತ್ತರ ವೇಳೆಯಾದ ನಂತರ ನಿಂತಿದ್ದೇನೆ.

ಅಧ್ಯಕ್ಷರು.—ಈಗಲೂ ಪಾಯಿಂಟ್ ಆಫ್ ಆರ್ಡರ್ ಇಲ್ಲ, ಆಲೋ ಮಾಡುವುದಿಲ್ಲ.

ಶ್ರೀ ಎಂ.ಎಸ್. ಕೃಷ್ಣನ್.—ಯಾವ ರೂಲ್‌ನಲ್ಲಿ ಇದೆ ?

ಅಧ್ಯಕ್ಷರು.—ಈಗ ವರದಿಯನ್ನು ಒಪ್ಪಿಸಲಿ. ತಾವು ದಯವಿಟ್ಟು ತಾವು ಕುಳಿತುಕೊಳ್ಳಿ. ಪಾಯಿಂಟ್ ಆಫ್ ಆರ್ಡರ್ ಪ್ರಶ್ನೆ ಬರುವುದಿಲ್ಲ. ಆಜೆಂಡಾ ಪ್ರಕಾರ ಬಿಟ್ಟು ಡೀವಿಯೇಷನ್ ಮಾಡಿದರೆ ಪಾಯಿಂಟ್ ಆಫ್ ಆರ್ಡರ್ ಬರುತ್ತದೆ. ಈಗ ಆಜೆಂಡಾ ಪ್ರಕಾರ ಹೊರಟಿದ್ದೇವೆ.

SRI M.S. KRISHNAN.—Point of Order in regard to any violation of the rules of procedure by either the Speaker or any Member can be raised by another Member.

ಅಧ್ಯಕ್ಷರು.—ಏನೂ ವೈಯೊಲೇಷನ್ ಆಗಿಲ್ಲ.

SRI M.S. KRISHNAN.—Point of Order.

ಅಧ್ಯಕ್ಷರು.—ದಯವಿಟ್ಟು ಕುಳಿತುಕೊಳ್ಳಿ ನಾನು ಹೇಳುತ್ತೇನೆ. ಆಮೇಲೆ ನೋಡೋಣ. ನಿಮ್ಮ ಆರ್ಗ್ಯುಮೆಂಟ್ಸ್ ನನಗೆ ವಿತಕ್ಕೂ ಬೇಕಾಗಿಲ್ಲ. ಆಜೆಂಡಾ ಪ್ರಕಾರ ಹೊರಟಿದ್ದೇನೆ. ನಿಮ್ಮನ್ನು ಕರೆಸುತ್ತೇನೆ, ನಾವು ನೀವು ಕೂಡಿ ಮಾತನಾಡೋಣ. ಈಗ ಪಾಯಿಂಟ್ ಆಫ್ ಆರ್ಡರ್ ಪ್ರಶ್ನೆ ಬರುವುದಿಲ್ಲ.

ಶ್ರೀ ಎಂ.ಎಸ್. ಕೃಷ್ಣನ್.—ನೀವು ಅವಕಾಶ ಕೊಟ್ಟಿದ್ದೇ ಸರಿಯಲ್ಲ. Only the Member can ask for the postponement. What you have done is not correct.

MR. SPEAKER.—I have already given my ruling. There is no point of order in Question hour. ನಾನು ಈಗ ರೂಲಿಂಗ್ ಕೊಟ್ಟಿದ್ದೇನೆ. ತಾವು ದಯವಿಟ್ಟು ಕುಳಿತುಕೊಳ್ಳಿ. ನಾವು ನೀವು ಡಿಸ್‌ಕಸ್ ಮಾಡೋಣ.

ಶ್ರೀ ಎಂ.ಎಸ್. ಕೃಷ್ಣನ್.—ತಾವು ಯೋಚನೆ ಮಾಡಿ.

MR. SPEAKER.—I have already given my ruling. ಪಾಯಿಂಟ್ ಆಫ್ ಆರ್ಡರ್ ಇಲ್ಲ ಎಂದು ರೂಲಿಂಗ್ ಕೊಟ್ಟಿದ್ದೇನೆ.

ಶ್ರೀ ಎಂ.ಎಸ್. ಕೃಷ್ಣನ್.—ತಾವು ದಯವಿಟ್ಟು ಯೋಚನೆ ಮಾಡಿ, ಪಾಯಿಂಟ್ ಆಫ್ ಆರ್ಡರ್ ಇದೆ ಎಂದು ಕೃಷ್ಣನ್ ಹವರ್‌ನಲ್ಲಿಯೇ ನಾನು ರೈಸ್ ಮಾಡಿದ್ದೆ. ಈಗ ಮತ್ತೊಮ್ಮೆ ರೈಸ್ ಮಾಡುತ್ತಿದ್ದೇನೆ. ನಾವು ಹೇಳುವುದನ್ನೇ ಕೇಳುವುದಕ್ಕೆ ನೀವು ತಯಾರು ಇಲ್ಲವಲ್ಲ

ಶ್ರೀ ಎಸ್. ಬಂಗಾರಪ್ಪ.—ತಾವು ಪ್ರೊಸೀಜರನ್ನು ಕೇಳಿದರೆ.....

ಅಧ್ಯಕ್ಷರು.—ಆ ಪ್ರಶ್ನೆ ಮುಗಿದುಹೋಗಿದೆ. I will consider it in my chamber. If there is any good in the argument of Sri Krishnan I will took into it.

(ಗೊಂದಲ)

SRI M.S. KRISHNAN.—You have not even heard me. When you will hear me on this Point of Order ?

ಅಧ್ಯಕ್ಷರು.—ಬಹಳ ಮಹತ್ವವಾದಂಥ ವಿಷಯ ಇದೆ. ದಯವಿಟ್ಟು ತಾವು ಕುಳಿತುಕೊಳ್ಳಿ. ಆಮೇಲೆ ನೋಡೋಣ.

ಶ್ರೀ ಎಂ.ಎಸ್. ಕೃಷ್ಣನ್.—ಒಂದೇ ಸಾರಿ ಅವರನ್ನು ಕೌನ್ಸಿಲ್‌ಗೆ ಹೇಗೆ ಕಳುಹಿಸಿದಿರಿ ?

MR. SPEAKER.—I have permitted the Hon. Minister to go and attend the Council.

SRI M.S. KRISHNAN.—Whether you have a right to do it ? You have no right to give postponement. That is what Kaul and Shakhdhar say.

MR. SPEAKER.—I have permitted him.

SRI M.S. KRISHNAN.—You have no right. That is my question.

MR. SPEARER.—You cannot question my right. ತಾವು ದಯವಿಟ್ಟು ಕುಳಿತುಕೊಳ್ಳಿ. ಕರೆಯುತ್ತೇನೆ, ಆಮೇಲೆ ಡಿಸ್‌ಕಷನ್ ಮಾಡೋಣ.

SRI M.S. KRISHNAN.—Why not ? If you go against the Rules of Procedure I have a right to question.

MR. SPEAKER.—I will not allow you.

SRI M.S. KRISHNAN.—I will request you to allow me to read this.

MR. SPEAKER.—If there is anything wrong in the ruling I will reconsider your views.

ಶ್ರೀ ಎಂ.ಎಸ್. ಕೃಷ್ಣನ್.—ನನಗೆ ಅರ್ಥವಾಗುವುದಿಲ್ಲ. ನಾವು ನೀವು ಸ್ನೇಹಿತರು ನಿಜ. ನಿಮ್ಮ ಬಗ್ಗೆ ಗೌರವ ಇದೆ. ಯಾವಾಗಲೂ ಗೌರವ ಕೊಡುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ತಮ್ಮ ತೀರ್ಮಾನಕ್ಕೆ ತಲೆಬಾಗುತ್ತೇವೆ, ನಮಗೆ ನಿಮ್ಮ ಬಗ್ಗೆ ಗೌರವ ಇದೆ. ಇನ್ನು ಮುಂದೆ ಕೌಲ್ ಅಂಡ್ ಶಕ್ದರ್ ಡಿಸಿಷನ್ಸ್ ಇದ್ದರೆ.....

(ಗೊಂದಲ)

MR. SPEAKER.—I will take your suggestions. I will take your experienced views.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಕನ್‌ವೆನ್‌ಷನ್ ಪ್ರಕಾರ Speaker has withheld the questions.

12-30 P.M.

MR. SPEAKER.—I request you to resume your seat. ನಾನು ನಿಮ್ಮನ್ನು ಕರೆದು I will take your views also.

ವರದಿಗಳನ್ನು ಒಪ್ಪಿಸುವುದು

ಶ್ರೀ ಪಿ. ಎಂ. ಚಿಕ್ಕಬೋರಯ್ಯ.—ಸನ್ಮಾನ್ಯ ಅಧ್ಯಕ್ಷರೇ, ನಾನು ಅಧೀನ ಶಾಸನಾ ರಚನಾ ಸಮಿತಿಯ ಅನೇ ಮತ್ತು ಐನೇ ವರದಿಗಳನ್ನು ಸಭೆಯ ಮುಂದೆ ಒಪ್ಪಿಸುತ್ತೇನೆ.

ಅಧ್ಯಕ್ಷರು.—ಅಧೀನ ಶಾಸನಾ, ರಚನಾ ಸಮಿತಿಯ ಅನೇ ಮತ್ತು ಐನೇ ವರದಿಯನ್ನು ಒಪ್ಪಿಸಲಾಯಿತು.

ಶ್ರೀ ಬಿ. ಎಚ್. ಎಂಕಾನಾಯಕ್.—ಸನ್ಮಾನ್ಯ ಅಧ್ಯಕ್ಷರೇ, ನನ್ನ ಹೆಸರು ಕೂಡ ಸೂಚನೆ ಆಗಿತ್ತು, ತೆಗೆದುಕೊಂಡಿಲ್ಲ.

ಅಧ್ಯಕ್ಷರು.—ನಿಮ್ಮ ಹೆಸರು ಆಗಲೇ ಬಂದು ಹೋಯಿತು, ಉತ್ತರ ಕೊಡಿಸುತ್ತೇನೆ. ನೀವು ಕುಳಿತುಕೊಳ್ಳಿ.

ಗಮನ ಸೆಳೆಯುವ ಸೂಚನೆ

ತುಮಕೂರು ಜಿಲ್ಲೆಯ ಪೊಲೇನಹಳ್ಳಿಯಲ್ಲಿ ಹರಿಜನ ಗಿರಿಜನ ಕುಟುಂಬ ದವರು ಸಾಂಕ್ರಾಮಿಕ ರೋಗದಿಂದ ಮೃತಪಟ್ಟಿರುವುದು.

ಅಧ್ಯಕ್ಷರು.—ಈಗ ಶ್ರೀಮತಿ ಕೆ. ಎಸ್. ನಾಗರತ್ನಮ್ಮ ಹಾಗೂ ಶ್ರೀ ಬಿ ಲಕ್ಕಪ್ಪನವರು; ತಮ್ಮ ಸೂಚನೆಯನ್ನು ಕೇಳಬೇಕು.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ವಿರೋಧಪಕ್ಷದ ನಾಯಕರು).—ಮಾನ್ಯ ಅಧ್ಯಕ್ಷರೇ ನಾನು ತುಮಕೂರು ಜಿಲ್ಲೆಯ ಪೊಲೇನಹಳ್ಳಿಯಲ್ಲಿ ಹರಿಜನ ಗಿರಿಜನ ವರ್ಗಕ್ಕೆ ಸೇರಿದ ಸುಮಾರು ೩೦ ಮಕ್ಕಳು ಸಾಂಕ್ರಾಮಿ ರೋಗದಿಂದ ಮೃತಪಟ್ಟಿರುವುದರಿಂದ ಉದ್ಭವಿಸಿರುವ ಗಂಭೀರ ಪರಿಸ್ಥಿತಿಯ ಬಗ್ಗೆ ಮಾನ್ಯ ಆರೋಗ್ಯ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಬಿ. ರಾಚಯ್ಯ (ಆರೋಗ್ಯ ಸಚಿವರು).—ಮಾನ್ಯ ಅಧ್ಯಕ್ಷರೇ, ತತ್ಸಂಬಂಧವಾಗಿ ನಾನು ಈ ಹೇಳಿಕೆಯನ್ನು ಮಾಡಬಯಸುತ್ತೇನೆ.

ತುಮಕೂರು ಜಿಲ್ಲೆಯ ಮಧುಗಿರಿ ತಾಲ್ಲೂಕಿನ ಪೊಲೇನಹಳ್ಳಿಯ ಜನ ಸಂಖ್ಯೆ ೧೧೧೪ ಇದ್ದು ಅದರಲ್ಲಿ ೪೨೫ ಜನ ಹರಿಜನ ಪಂಗಡಕ್ಕೆ ಸೇರಿದವರಾಗಿರುತ್ತಾರೆ. ಆರು ವರ್ಷ ವಯಸ್ಸಿಗಿಂತ ಕೆಳಗಿನ ಮಕ್ಕಳ ಸಂಖ್ಯೆ ೧೦೨ ಇದ್ದು ಅದರಲ್ಲಿ ೪೪ ಮಕ್ಕಳು ಹರಿಜನ ಗುಂಪಿಗೆ ಸೇರಿದವರಾಗಿರುತ್ತಾರೆ.